# ಅವಿಭಜಿತ ಕೋಲಾರ ಜಿಲ್ಲೆಯ ಮೌಖಿಕ ಸಾಹಿತ್ಯ ಪರಂಪರೆಯಲ್ಲಿ ಬೇಸಾಯ ಮತ್ತು ದ್ಯಾವರ ಸಂಸ್ಕೃತಿ

**ಅಶ್ವತ್ಥ ಎಸ್.**[*], **ನಾಗೇಂದ್ರ ಎಚ್. ಗಂಗಾಧರಯ್ಯ**[**]
& **ಸುಮ ವೈ.ಎನ್.**[***]

**DOI: https://doi.org/10.5281/zenodo.21793577**

**ABSTRACT**

ಈ ಲೇಖನವು ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳ ಮೌಖಿಕ ಸಾಹಿತ್ಯ ಪರಂಪರೆಯಲ್ಲಿ ಬೇಸಾಯ ಮತ್ತು ದ್ಯಾವರಗಳ ಸ್ಥಾನವನ್ನು ವಿಶ್ಲೇಷಿಸುತ್ತದೆ. ಈ ಭಾಗದ ಜನಪದ ಜೀವನ ಕೃಷಿ ಆಧಾರಿತವಾಗಿದ್ದು, ಕೃಷಿ ಚಟುವಟಿಕೆಗಳು, ಎತ್ತುಗಳ ಆರಾಧನೆ, ಬಿತ್ತನೆ, ಕೊಯ್ಲು, ಸಂಕ್ರಾಂತಿ, ಜಾತ್ರೆಗಳು ಹಾಗೂ ವಿವಿಧ ದ್ಯಾವರ ಆಚರಣೆಗಳು ಜನಪದ ಸಾಹಿತ್ಯದೊಂದಿಗೆ ಅವಿನಾಭಾವ ಸಂಬಂಧ ಹೊಂದಿವೆ. ಈ ಆಚರಣೆಗಳ ಸಂದರ್ಭದಲ್ಲಿ ಹಾಡಲಾಗುವ ಜನಪದ ಗೀತೆಗಳು, ಗಾದೆಗಳು, ಕಥೆಗಳು ಹಾಗೂ ಐತಿಹ್ಯಗಳು ಸ್ಥಳೀಯ ಸಮುದಾಯದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಬದುಕನ್ನು ಪ್ರತಿಬಿಂಬಿಸುತ್ತವೆ. ಕನ್ನಡ, ತೆಲುಗು, ತಮಿಳು ಹಾಗೂ ಉರ್ದು ಭಾಷಾ ಸಂಸ್ಕೃತಿಗಳ ಪರಸ್ಪರ ಪ್ರಭಾವವೂ ಈ ಪ್ರದೇಶದ ಮೌಖಿಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ಕೃಷಿ, ಪ್ರಕೃತಿ, ದೈವಾರಾಧನೆ ಮತ್ತು ಸಮುದಾಯ ಜೀವನವನ್ನು ಆಧರಿಸಿದ ಈ ಮೌಖಿಕ ಪರಂಪರೆ ಸ್ಥಳೀಯರ ಜೀವನ ಮೌಲ್ಯಗಳು, ಪರಿಸರ ಜ್ಞಾನ ಮತ್ತು ಸಾಂಸ್ಕೃತಿಕ ಗುರುತನ್ನು ತಲೆಮಾರುಗಳಿಂದ ಸಂರಕ್ಷಿಸುತ್ತಾ ಬಂದಿದೆ. ಆಧುನಿಕತೆಯ ಪ್ರಭಾವದಿಂದ ಕೆಲವು ಆಚರಣೆಗಳು ಕ್ಷೀಣಿಸುತ್ತಿದ್ದರೂ, ಅವುಗಳ ದಾಖಲೀಕರಣ ಮತ್ತು ಸಂರಕ್ಷಣೆ ಅಗತ್ಯವೆಂಬುದನ್ನು ಲೇಖನ ಒತ್ತಿ ಹೇಳುತ್ತದೆ.

* **ಅಶ್ವತ್ಥ ಎಸ್.**, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಚಿಂತಾಮಣಿ.

** **ನಾಗೇಂದ್ರ ಎಚ್. ಗಂಗಾಧರಯ್ಯ**, ಸಹಾಯಕ ಪ್ರಾಧ್ಯಾಪಕರು, ದಯಾನಂದ ಸಾಗರ್ ಯೂನಿವರ್ಸಿಟಿ, ಹಾರೋಹಳ್ಳಿ, ಬೆಂಗಳೂರು ದಕ್ಷಿಣ.

*** **ಸುಮ ವೈ.ಎನ್.**, ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, ಜಮಖಂಡಿ.

**KEYWORDS:** ಮೌಖಿಕ ಸಾಹಿತ್ಯ, ಜನಪದ ಸಾಹಿತ್ಯ, ಬೇಸಾಯ ಸಂಸ್ಕೃತಿ, ದ್ಯಾವರ, ಜಾತ್ರೆಗಳು, ಕೃಷಿ ಆಚರಣೆಗಳು, ಜನಪದ ನಂಬಿಕೆಗಳು.

ಯಾವುದೇ ಭಾಗದ ಸಾಹಿತ್ಯ ಪರಂಪರೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಆ ಭಾಗದ ಮೌಖಿಕ ಸಾಹಿತ್ಯ ಅಂದರೆ ಜನಪದ ಸಾಹಿತ್ಯವನ್ನು ಮುಖ್ಯವಾಗಿ ಪರಿಗಣಿಸಲೇಬೇಕು. ಒಂದು ಗಟ್ಟಿಯಾದ ಸಾಹಿತ್ಯ ಮತ್ತು ಸಾಹಿತ್ಯ ಪರಂಪರೆ ರೂಪುಗೊಳ್ಳುವುದರ ಹಿಂದೆ ಜನಪದದ ಕೊಡುಗೆ ಅಪಾರವಾಗಿರುತ್ತದೆ. ಅವಿಭಜಿತ ಕೋಲಾರ ಜಿಲ್ಲೆಯು ಪ್ರಸ್ತುತ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಾಗಿ ವಿಭಾಗಿಸಲ್ಪಟ್ಟಿದ್ದು, ಈ ಹಿನ್ನೆಲೆಯಲ್ಲಿ ಎರಡು ಜಿಲ್ಲೆಗಳ ಮೌಖಿಕ ಸಾಹಿತ್ಯ ಪರಂಪರೆಯಲ್ಲಿ ಬೇಸಾಯ ಮತ್ತು ದ್ಯಾವರಗಳ ಅವಲೋಕನವನ್ನು ತೆಗೆದುಕೊಳ್ಳಲಾಗಿದೆ.

ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ವಿವಿಧ ಸಮುದಾಯಗಳ ಜನರು ಜೀವಿಸುತ್ತಿದ್ದು ಅವರದ್ದೇ ಆದ ವೈವಿಧ್ಯಮಯ ಜನಪದ ಸಂಸ್ಕೃತಿ ಇಲ್ಲಿದೆ. ಮಗು ಜನಿಸಿದಾಗಿಂದ ಹಿಡಿದು ಅದು ಬೆಳವಣಿಗೆ ಹೊಂದಿದಂತೆ ಅದಕ್ಕೆ ನೀಡಲಾಗುವ ಸಂಸ್ಕಾರಗಳಾದ ಮಗುವಿಗೆ ನೀರು ಹಾಕುವುದು, ಹೊಸ್ತಿಲು ದಾಟಿದ ಶಾಸ್ತ್ರ, ಮುಂದೆ ಹೆಣ್ಣುಮಗು ಮೈನೆರೆದರೆ ಒಸಗೆ ಹಾಕುವುದು, ಮಕ್ಕಳಿಗೆ ಮುನಿದ್ಯಾವರ ಮಾಡುವುದು, ಮದುವೆ, ನಾಮಕರಣ, ಹೆಣ್ಣುಮಕ್ಕಳಿಗೆ ಉಡಿ ತುಂಬುವುದು, ಸತ್ತಾಗ ನಡೆಸುವ ಸಂಸ್ಕಾರಗಳು, ಅದೇ ರೀತಿ ಕೃಷಿ ಪ್ರಾಧಾನ್ಯತೆಯ ಸಮಾಜದಲ್ಲಿ ನಡೆಸುವ ಉಳುಮೆ ಮಾಡುವ, ಬಿತ್ತನೆ ಮಾಡುವ, ರಾಗಿ ಮತ್ತು ಭತ್ತದ ಕಣ ಮಾಡುವ, ರಾಗಿ ಬೀಸುವ, ಭತ್ತ ಕುಟ್ಟುವ, ಫಸಲು ಬಂದ ನಂತರ, ಬೇಸಿಗೆಯಲ್ಲಿ ಊರ ದೇವರುಗಳಿಗೆ ಜಾತ್ರೆ ಮಾಡುವ, ದ್ಯಾವರ ಮಾಡುವ ಮುಂತಾದ ಜನಪದ ಆಚರಣೆಗಳ ದೊಡ್ಡದೊಂದು ಪಟ್ಟಿಯನ್ನೇ ಮಾಡಬಹುದು. ಈ ಎಲ್ಲಾ ಆಚರಣೆಗಳೊಂದಿಗೆ ಸಾಹಿತ್ಯವೂ ಹಾಸುಹೊಕ್ಕಾಗಿರುವುದನ್ನು ಗಮನಿಸಬಹುದು. ಉದಾಹರಣೆಗೆ ದ್ಯಾವರ ಪದಗಳು, ಬಿತ್ತನೆಯ ಪದಗಳು, ಕುಟ್ಟುವ ಪದಗಳು, ಬೀಸುವ ಪದಗಳು, ಒಸಗೆ ಪದಗಳು, ಸೋಬಾನೆ ಪದಗಳು ಮೊದಲಾದವುಗಳಿಗೆ ಸಂಬಂಧಿಸಿದ ಆಚರಣೆಯ ಹಿಂದಿನ ಕಥೆ ಅಥವಾ ಇತಿಹಾಸವನ್ನು ಹೇಳುವ ಪದಗಳನ್ನು ಗುರುತಿಸಬಹುದು.

ಇದಷ್ಟೇ ಅಲ್ಲದೇ, ಆಧ್ಯಾತ್ಮಿಕ ಮಾರ್ಗಿಗಳು ಕೆಲವು ತತ್ತ್ವಪದಗಳನ್ನು ಮತ್ತು ಹರಿಕಥೆಗಳನ್ನು ಹಾಡುವುದು ಈ ಭಾಗಗಳಲ್ಲಿ ಹೆಚ್ಚು ರೂಢಿಯಲ್ಲಿವೆ. ಕೋಲಾರ ತಾಲ್ಲೂಕಿನ ವೇಮಗಲ್ ಬಳಿ ಇರುವ ಮದ್ದೇರಿ ಎಂಬ ಗ್ರಾಮದಲ್ಲಿ ಪಿ.ಮುನಿರೆಡ್ಡಿ ಎಂಬುವವರು ಹರಿಕಥೆ ಮಾಡುವುದರಲ್ಲಿ ಮತ್ತು ರಾಮಾಪುರ ಗ್ರಾಮದಲ್ಲಿ ರಾಮಣ್ಣ ಎಂಬುವವರು ಶನಿಮಹಾತ್ಮನ ಕಥೆ ಹೇಳುವುದರಲ್ಲಿ ತುಂಬಾ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಇವುಗಳಲ್ಲದೇ ಮನರಂಜನೆ ಮತ್ತು ಸಮಯ ಕಳೆಯಲು ಒಗಟುಗಳು,

ಗಾದೆಗಳು ಹಾಗೂ ಮಕ್ಕಳು ನಿದ್ದೆ ಮಾಡುವುದಕ್ಕಾಗಿ ಹೇಳಲಾಗುವ ಚಂದಮಾಮ ಮತ್ತು ರಾಜ–ರಾಣಿಯರ ಕತೆಗಳನ್ನು ಸಹ ಜಾನಪದ ಸಾಹಿತ್ಯದ ಭಾಗವಾಗಿಯೇ ನೋಡಲಾಗುತ್ತದೆ. ಅಕ್ಷರಜ್ಞಾನ ಇಲ್ಲದವರು ಸಾಹಿತ್ಯವನ್ನು ರಚಿಸಿ ಹಾಡುವ ಮೂಲಕ ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮೌಖಿಕವಾಗಿ ದಾಟಿಸುವ ಕೆಲಸವನ್ನು ಮಾಡುತ್ತಿದ್ದರು. ಹೀಗೆ ವಿವಿಧ ಸಂದರ್ಭಗಳಲ್ಲಿ ಸೃಷ್ಟಿಯಾದ ಜಾನಪದ ಸಾಹಿತ್ಯವು ಕೋಲಾರ–ಚಿಕ್ಕಬಳ್ಳಾಪುರ ಪ್ರಾಂತ್ಯಗಳಲ್ಲಿ ಶ್ರೀಮಂತವಾಗಿಯೇ ಇದೆ.

ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳು ಒಂದೇ ಭೌಗೋಳಿಕ ಮತ್ತು ಭಾಷಿಕ ಪರಿಸರವನ್ನು ಹೊಂದಿರುವ ಜಿಲ್ಲೆಗಳಾಗಿದ್ದು, ಇಲ್ಲಿ ಕನ್ನಡದೊಂದಿಗೆ ತೆಲುಗು ಹಾಗೂ ತಮಿಳು ಭಾಷೆಗಳೂ ಬಳಕೆಯಲ್ಲಿವೆ. ತೀರ ಗಡಿ ಭಾಗದ ಕನ್ನಡ ಶಾಲೆಗಳಲ್ಲಿ ಕನ್ನಡ ಪಾಠವನ್ನು ತೆಲುಗಿನಲ್ಲಿಯೇ ಹೇಳುವುದನ್ನು ಇಂದಿಗೂ ಸಹ ಕಾಣಬಹುದು. ಎರಡು ಭಾಷೆಗಳನ್ನಾಡುವ ಜನರು ಈ ಭಾಗದಲ್ಲಿದ್ದರೂ, ಎಂದಿಗೂ ಭಾಷಾ ಸಾಮರಸ್ಯವನ್ನು ಹಾಳು ಮಾಡಿಕೊಳ್ಳದ ಹೆಗ್ಗಳಿಕೆ ಈ ಭಾಗಕ್ಕಿದೆ. ಈ ಭಾಗದ ಜನಪದರು ಕನ್ನಡ, ತೆಲುಗು ಭಾಷೆಗಳನ್ನು ಪರಸ್ಪರ ಪೂರಕವಾಗಿ ಬಳಸಿಕೊಂಡೇ ಬೆಳೆದಿರುವುದನ್ನು ಗಮನಿಸಬಹುದು. ಹಲವು ಶಿಷ್ಟಕವಿಗಳು ಸಹ ಕನ್ನಡ ತೆಲುಗು ಎರಡೂ ಭಾಷೆಗಳಲ್ಲೂ ಸಾಹಿತ್ಯ ರಚಿಸಿ ಭಾಷಾ ಸಾಮರಸ್ಯವನ್ನು ಎತ್ತಿಹಿಡಿದಿದ್ದಾರೆ. ಅಲ್ಲದೇ ಕನ್ನಡ, ತಮಿಳು ತೆಲುಗಿನೊಂದಿಗೆ ಉರ್ದು ಮಾತನಾಡುವ ಮುಸಲ್ಮಾನರೂ ಈ ಭಾಗದಲ್ಲಿದ್ದು ಈ ಭಾಷೆಗಳಲ್ಲೂ ಮೌಖಿಕ ಸಾಹಿತ್ಯ ಕೃಷಿ ನಡೆದಿರುವುದನ್ನು ಗಮನಿಸಬಹುದು.

**ಬೇಸಾಯ**

ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳು ಮುಖ್ಯವಾಗಿ ರೈತಾಪಿ ವರ್ಗಗಳು ವಾಸಿಸುವ ಪ್ರದೇಶವಾಗಿದ್ದು, ಇಲ್ಲಿನ ರೈತರು ರಾಗಿ, ಜೋಳ ಇತ್ಯಾದಿಗಳನ್ನು ಬೆಳೆದುಕೊಳ್ಳಲು ಮಳೆಯನ್ನೇ ಆಶ್ರಯಿಸಿರುತ್ತಾರೆ. ಮಳೆಗಾಲ ಪ್ರಾರಂಭವಾಗುತ್ತಲೇ ರೈತರ ಕೃಷಿ ಚಟುವಟಿಕೆಗಳು ಗರಿಗೆದರುತ್ತವೆ. ಉಳುಮೆಗಾಗಿ ಎತ್ತು ಮತ್ತು ಆಯುಧಗಳನ್ನು, ಬಿತ್ತನೆಗೆ ಉತ್ತಮ ಕಾಳು–ಬೀಜಗಳನ್ನು ಹೊಂದಿಸುವಲ್ಲಿಂದ ಹಿಡಿದು ಬೆಳೆದ ಬೆಳೆಗಳನ್ನು ಕಣಕ್ಕೆ ತಂದು ಶುದ್ಧಮಾಡಿ ಮನೆಗೆ ತರುವವರೆಗೂ ಬಿಡುವಿರದ ಕೆಲಸ ಇದ್ದೇ ಇರುತ್ತಿತ್ತು. ಹಿಂದೆ ಮನುಷ್ಯನು ಆಸಕ್ತಿಯಿಂದಲೂ, ಅನಿವಾರ್ಯತೆಯಿಂದಲೂ ಈ ಕೆಲಸಗಳನ್ನೆಲ್ಲಾ ತಾನೇ ಮಾಡಬೇಕಾಗುತ್ತಿತ್ತು. ಆದರೆ, ಆಧುನಿಕ ಯಂತ್ರ ನಾಗರಿಕತೆಯ ಭರಾಟೆಯಲ್ಲಿ ಇಂತಹ ಚಿತ್ರಣಗಳು ಈಗೀಗ ಕಣ್ಮರೆಯಾಗುತ್ತಿರುವುದು ವಿಷಾದದ ಸಂಗತಿಯಾಗಿದೆ.

ಈ ಹಿನ್ನೆಲೆಯಲ್ಲಿ ಹೊಲ ಉಳುಮೆ ಮಾಡುವ ಎತ್ತುಗಳನ್ನು ರೈತರು ಬಹಳ ಗೌರವ, ಭಕ್ತಿ–ಭಾವದಿಂದ ಪೂಜಿಸಿ, ಅದು ಸಾಕ್ಷಾತ್ ಪರಶಿವನ ವಾಹನವಾದ ನಂದಿಯೇ ಎಂದು ಜನ ನಂಬುವುದಕ್ಕೆ ಒಂದು ಸುಂದರವಾದ ಜನಪದ ಕತೆ ಇದೆ. ಒಮ್ಮೆ ಶಿವನು ತನ್ನ ವಾಹನ ನಂದಿಯನ್ನು ಕರೆದು, ನೀನೀಗ ಭೂಲೋಕಕ್ಕೆ ಹೋಗಿ

ಭೂಲೋಕದ ಜನರನ್ನು ಕುರಿತು ಮೂರು ಹೊತ್ತು ನನ್ನ ಪೂಜೆಯನ್ನು, ಒಂದು ಹೊತ್ತು ಊಟವನ್ನು ಮಾಡುವಂತೆ ತಿಳಿಸು ಎಂದು ಹೇಳಿದನಂತೆ. ಇದನ್ನು ಕೇಳಿದ ನಂದಿ ಭೂಮಿಗೆ ಬಂದು ಜನರ ಬಳಿ ಈ ವಿಚಾರವನ್ನು ಹೇಳುವಾಗ, ಪಾಪ ಈ ಜನರು ಒಂದು ದಿನಕ್ಕೆ ಒಂದೇ ಹೊತ್ತು ಊಟ ಮಾಡಿದರೆ ಹೇಗೆ? ಎಂದು ಆಲೋಚಿಸಿ, ನೀವೆಲ್ಲ ಮೂರು ಹೊತ್ತು ಊಟ ಮಾಡಿ, ಒಂದು ಹೊತ್ತು ಶಿವಪೂಜೆ ಮಾಡಿ ಎಂದು ತಿಳಿಸಿದನಂತೆ. ಇದರಿಂದ ಕುಪಿತಗೊಂಡ ಶಿವನು ಭೂಲೋಕದ ಜನರೆಲ್ಲ ಮೂರು ಹೊತ್ತು ಉಣ್ಣಬೇಕಾದರೆ ಎಷ್ಟು ದವಸ-ಧಾನ್ಯಗಳು ಬೇಕು?, ಅಷ್ಟೆಲ್ಲ ಧಾನ್ಯಗಳು ಎಲ್ಲಿಂದ ತರುತ್ತಾರೆ?, ನೀನು ಮಾಡಿದ ತಪ್ಪಿಗೆ ನೀನೇ ಜವಾಬ್ದಾರನು. ನೀನೇ ಭೂಮಿಗೆ ಹೋಗಿ ರೈತರ ಜೊತೆ ಕೆಲಸ ಮಾಡಿ ಅವರ ಹೊಟ್ಟೆ ತುಂಬಿಸು ಎಂದು ನಂದಿಯನ್ನು ಭೂಮಿಗೆ ಕಳುಹಿಸಿದನಂತೆ. ಅಂದಿನಿಂದ ನಂದಿ ರೈತರ ಜೊತೆ ಇದ್ದು ರೈತರ ಎಲ್ಲಾ ಕೆಲಸ ಕಾರ್ಯಗಳಲ್ಲೂ ಭಾಗಿಯಾಗಿ ಅವರು ಮೂರು ಹೊತ್ತು ಊಟ ಮಾಡುವಂತಾಯಿತು ಎಂದು ಜನರು ನಂಬುತ್ತಾರೆ. ಹೀಗೆ ಶಿವನಿಂದ ದೂರಾಗಿ ನಮ್ಮ ಹೊಟ್ಟೆ ತುಂಬಿಸಲು ದುಡಿಯುತ್ತಿರುವ ಬಸವನೆಂದರೆ ರೈತಾಪಿ ಜನರಿಗೆ ಎಲ್ಲಿಲ್ಲದ ಪ್ರೀತಿ ಮತ್ತು ಪೂಜ್ಯ ಭಾವನೆ.

ಹೀಗಾಗಿಯೇ ರೈತರ ಪ್ರತಿಯೊಂದು ಕೃಷಿ ಚಟುವಟಿಕೆಗಳಲ್ಲೂ ಎತ್ತುಗಳಿಗೆ ಬಹಳ ಮಹತ್ವದ ಸ್ಥಾನವಿದೆ. ಹೊಲ ಉಳುಮೆ ಮಾಡುವಾಗ, ಬಿತ್ತನೆ ಮಾಡುವಾಗ ತಮಗಾಗಿ ತಯಾರಿಸಿಕೊಂಡ ಗುಂಡು ಕಡುಬುಗಳನ್ನು ಮೊದಲು ತಮ್ಮ ಹಸುಗಳಿಗೆ ತಿನ್ನಿಸಿ, ಆಮೇಲೆ ತಾವು ತಿನ್ನುವ ಆಚರಣೆ ಈ ಭಾಗದಲ್ಲಿ ಚಾಲ್ತಿಯಲ್ಲಿದೆ. ಮುಂಗಾರು ಸಮಯದಲ್ಲಿ ಉಳುಮೆ ಮಾಡುವ ಆರಂಭದಲ್ಲಿ ನೇಗಿಲನ್ನು ಕಟ್ಟುವ ಮೊದಲು ಎತ್ತುಗಳ ಕಾಲುಗಳಿಗೆ ರೈತರು ನಮಸ್ಕಾರ ಮಾಡುವ ಪದ್ಧತಿ ಈ ಭಾಗದಲ್ಲಿ ಜನಜನಿತವಾಗಿದೆ.

ವರ್ಷದ ಮೊದಲ ತಿಂಗಳಾದ ಜನವರಿಯ ಸುಗ್ಗಿ ಕಾಲದ ಕೊನೆ ಘಟ್ಟದಲ್ಲಿ ಬರುವ ಸಂಕ್ರಾಂತಿ ಹಬ್ಬವನ್ನು ಈ ಭಾಗಗಳಲ್ಲಿ ಅರ್ಥಪೂರ್ಣವಾಗಿ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಸಂಕ್ರಾಂತಿ ಹಬ್ಬವೆಂದರೆ ಎಲ್ಲರಿಗೂ ತಿಳಿದಿರುವ ಹಾಗೆ ಇದು ರೈತರ ಹಬ್ಬ. ತಾವು ಬೆಳೆದ ಬೆಳೆಯನ್ನು ರಾಶಿ ಮಾಡಿ ಅದನ್ನು ಪೂಜಿಸುವ, ಅದರ ಪಾಲುದಾರರಿಗೆ ಅವರ ಪಾಲನ್ನು ಕೊಡುವ ಮತ್ತು ಎತ್ತುಗಳಿಗೆ ವಿಶೇಷವಾಗಿ ಸಿಂಗರಿಸಿ ಊರಿನಲ್ಲಿ ಮೆರವಣಿಗೆ ಮಾಡಿದ ನಂತರ ಅದೇ ದಿನ ಸಂಜೆ ಎತ್ತುಗಳನ್ನು ಬೆಂಕಿಯಲ್ಲಿ ಹಾಯಿಸಲಾಗುತ್ತದೆ. ಉತ್ತಮವಾದ ಪ್ರದರ್ಶನ ನೀಡುವ ಅಥವಾ ಬಲಿಷ್ಟವಾಗಿ ಬೆಳೆದಿರುವ ಎತ್ತುಗಳಿಗೆ ಬಹುಮಾನ ವಿತರಿಸುವ ಪದ್ಧತಿಯೂ ಈಗೀಗ ಚಾಲ್ತಿಗೆ ಬರುತ್ತಿರುವುದನ್ನು ಗಮನಿಸಬಹುದು. ಅದೇ ದಿನ ಸಂಜೆ ರೈತಾಪಿ ಜನ ಪಂಜಿನ ಮೆರವಣಿಗೆ ಮಾಡುವುದು ವಿಶೇಷವಾಗಿದೆ.

ಕೇವಲ ಎತ್ತುಗಳನ್ನಷ್ಟೇ ಅಲ್ಲದೆ, ಹಾಲು ಕೊಡುವ ಹಸುಗಳನ್ನು, ಎಮ್ಮೆಗಳನ್ನೂ ಅಷ್ಟೇ ಪ್ರೀತಿಯಿಂದ ಸಿಂಗರಿಸಿ, ಆರೈಕೆ ಮಾಡುವುದನ್ನು

ನೋಡಬಹುದು. ಹಸುವಿಗೆ ಗೋಮಾತೆಯೆಂಬ ದೈವತ್ವದ ಕಲ್ಪಿತ ಸ್ಥಾನ ಸಿಕ್ಕ ಮೇಲೆ ಹಸುಗಳ ಸೇವೆ, ಹಾರೈಕೆ ಮತ್ತಷ್ಟು ಹೆಚ್ಚಿದ್ದರೂ, ಎಮ್ಮೆಗಳನ್ನು ಕಡೆಗಣಿಸದೇ ಇರುವುದು ಈ ಪ್ರದೇಶದ ವಿಶೇಷ. 'ಹೆಣ್ಣು ಮಗಳಿಗೆ ತವರು ಮನೆಯವರು ಕೊಡುವ ಅಮೂಲ್ಯ ಉಡುಗೊರೆಗಳಲ್ಲಿ ಎಮ್ಮೆಯೂ ಸೇರಿರುತ್ತಿತ್ತು' ಎಂಬುದನ್ನು,

**"ತೊಟ್ಟಿಲ್ಲ ಹೊತ್ಕೊಂಡು, ತೌರ್ ಬಣ್ಣ ಉಟ್ಕಂಡು**
**ಅಪ್ಪಕೊಟ್ಟ ಎಮ್ಮೆ ಹೊಡಕೊಂಡು ತವರೂರ**
**ತಿಟ್ಟತ್ತಿ ತಿರುಗಿ ನೋಡ್ಯಾಳು"**

ಎಂಬ ಪ್ರಸಿದ್ಧ ಜನಪದ ಗೀತೆಯ ಸಾಲುಗಳಿಂದ ತಿಳಿಯಬಹುದಾಗಿದೆ.

ಜನಪದರಲ್ಲಿ ಎತ್ತುಗಳನ್ನು ಕೊಳ್ಳುವ ಮತ್ತು ಮಾರುವ ವ್ಯವಹಾರವೂ ಬಲು ಜೋರಿನದ್ದೆ. ದೂರದ ಊರುಗಳಿಂದ ತಾವು ಸಾಕಿ ಬೆಳೆಸಿರುವ ದಷ್ಟಪುಷ್ಟ ಹಸುಗಳ ಜೋಡಿಗಳನ್ನು ಮಾರಲು ಬಂದಿರುವವರು ಮತ್ತು ತಮ್ಮ ಹೊಲದ ಉಳುಮೆ ಇತ್ಯಾದಿ ಕೆಲಸಗಳಿಗಾಗಿ ಎತ್ತುಗಳನ್ನು ಕೊಳ್ಳಲು ಬಂದಿರುವವರು ಆಗಾಗ ಒಂದು ಕಡೆ ಸೇರಿ ವ್ಯಾಪಾರ ಮಾಡುವುದುಂಟು. ಇದು ಕೇವಲ ವ್ಯಾಪಾರವಲ್ಲ. ಎತ್ತುಗಳನ್ನು ಮಾರುವವರ ಮತ್ತು ಕೊಳ್ಳುವವರ ಜಾತ್ರೆ. ಇದನ್ನೇ ಎತ್ತುಗಳ ಪರಿಷೆ ಎಂದು ಕರೆಯುತ್ತಾರೆ. ಕೋಲಾರ-ಚಿಕ್ಕಬಳ್ಳಾಪುರ ಭಾಗದ ಎಚ್.ಕ್ರಾಸ್ ಇಂತಹ ಎತ್ತುಗಳ ಪರಿಷೆಗೆ ಪ್ರಸಿದ್ಧವಾದ ಒಂದು ಸ್ಥಳ. ಪ್ರತಿ ವರ್ಷ ಇಲ್ಲಿ ಸೇರುವ ದನಗಳ ಪರಿಷೆಯಲ್ಲಿ ಸಾವಿರಾರು ರೈತರು ಭಾಗವಹಿಸುತ್ತಾರೆ. ಇದರೊಂದಿಗೆ ಆಂಜನೇಯನ ತೇರು, ಜಾತ್ರೆ ಇತ್ಯಾದಿಗಳು ಇಲ್ಲಿ ನಡೆಯುತ್ತವೆ. ಇಂತಹ ದನಗಳ ಮಾರಾಟವನ್ನೇ ಕೇಂದ್ರವಾಗಿಸಿಕೊಂಡ ಹಲವು ಪರಿಷೆಗಳು ಈ ಭಾಗದಲ್ಲಿ ನಡೆಯುತ್ತಿದ್ದವು. ಈಗೀಗ ಅವೆಲ್ಲವೂ ಕಡಿಮೆ ಆಗುತ್ತಿವೆ. ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ತೋರ್ನಹಳ್ಳಿ ಗ್ರಾಮದ ಶ್ರೀ ಸಫಲಾಂಬದೇವಿ ಎತ್ತುಗಳ ಪರಿಷೆ ಇಡೀ ನಾಡಿನಲ್ಲಿಯೇ ಪ್ರಸಿದ್ಧಿ ಪಡೆದಿದೆ. ಲಕ್ಷಾಂತರ ಎತ್ತುಗಳು ಸೇರಿ ಅತ್ಯಂತ ಭರಾಟೆಯಲ್ಲಿ ಜಾತ್ರೆ ಇಂದಿಗೂ ನಡೆಯುತ್ತಿರುವುದನ್ನು ಗಮನಿಸಬಹುದು. ಅದೇ ರೀತಿ ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಆವನಿ ಗ್ರಾಮದಲ್ಲಿ ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕಿನ ನಂದಿ ಗ್ರಾಮದ ಭೋಗನಂದೀಶ್ವರ ಜಾತ್ರೆಯಲ್ಲಿ ಎತ್ತುಗಳ ವ್ಯವಹಾರ ಅತ್ಯಂತ ಭರಾಟೆಯಿಂದ ನಡೆಯುತ್ತದೆ.

ಕೃಷಿ ಚಟುವಟಿಕೆಗಳಿಗಾಗಿ, ಹುಲ್ಲು, ದವಸ-ಧಾನ್ಯಗಳನ್ನು ಸಾಗಿಸಲು ಬಂಡಿಗಳನ್ನು ಕಟ್ಟುವ ಪದ್ಧತಿ ಜನಪದರಲ್ಲಿದೆ. ಬಂಡಿಗಳು ಕೇವಲ ಸರಕು-ಸಾಗಾಣಿಕೆ ವಾಹನಗಳಷ್ಟೇ ಅಲ್ಲದೇ ಹಳ್ಳಿಗಾಡಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಎತ್ತಿನ ಬಂಡಿಯ ಮೇಲೆ ವಿವಿಧ ರೀತಿಯ ಚಿತ್ತಾರಗಳನ್ನು ಉದಾಹರಣೆಗೆ ಎಲೆ-ಅಡಿಕೆ ಚೀಲ, ಕುಟ್ಟಾಣಿ, ಸುಣ್ಣದ ಡಬ್ಬಿ ಇತ್ಯಾದಿ... ಜೊತೆಗೆ ವಿವಿಧ ರೀತಿಯ ಪಕ್ಷಿ ಪ್ರಾಣಿಗಳ ಚಿತ್ರಗಳೊಂದಿಗೆ ಸಿಂಗರಿಸಿರುವುದು ಕಂಡು ಬರುತ್ತದೆ. ಇದು ಜನಪದರ ಕಲೆಯ ಅಭಿರುಚಿಗೆ ನಿದರ್ಶನವಾಗಿದೆ. ಇವಲ್ಲದೇ ಹಲವು ಗೋಡೆ ಚಿತ್ರಗಳು, ರಂಗೋಲಿ

ಇತ್ಯಾದಿಗಳ ಮೂಲಕವೂ ಜನಪದರ ಚಿತ್ರಕಲೆ ಅನಾವರಣಗೊಂಡಿರುವುದನ್ನು ಗಮನಿಸಬಹುದು.

ಜನಪದ ಸಾಹಿತ್ಯವನ್ನು ಗಮನಿಸಿದಾಗ ಕೃಷಿ ಚಟುವಟಿಕೆ, ಎತ್ತುಗಳ ಸಾಕಾಣಿಕೆ ಅವುಗಳ ಮಾರಾಟ, ಬೆಳೆಗಳ ಕುಯ್ಲು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಹಲವು ಜನಪದ ಗೀತೆಗಳು, ಗಾದೆಗಳು ರಚನೆಯಾಗಿವೆ. "10 ರೂಪಾಯಿಗೆ ಎಮ್ಮೆ ತಂದು, ಒಂದು ರೂಪಾಯಿ ಮೂಗುದಾರಕ್ಕೆ ಅತ್ತರಂತೆ!", "ಎತ್ತು ಏರಿಗೆ ಎಳೆದರೆ ಎಮ್ಮೆ ನೀರಿಗೆ ಇಳೀತಂತೆ", "ಹಸುಗೆ ಈಯೋ ಚಿಂತೆ ಆದರೆ ಕೋಣಕ್ಕೆ ದಾಟೋ ಚಿಂತೆ", "ಮುಂದೆ ಸಾಗೋ ಎತ್ತುಗಳು ಸರಿಯಾಗಿದ್ದರೆ ಹಿಂದೆ ಹೋಗೋವು ಸರಿಯಾಗಿ ಹೋಗ್ತಾವೆ," "ಭರಣಿ ಮಳೆಯಲ್ಲಿ ಬಿತ್ತಿದರೆ ಧರಣಿಯಲ್ಲಾ ಧಾನ್ಯ", "ಹಾಲಿದ್ದಾಗ ಹಬ್ಬ ಮಾಡು, ಬಿಸಿಲಿದ್ದಾಗ ಹಪ್ಪಳ ಮಾಡು" "ಹಲ್ಲು ನೋಡಿ ಎತ್ತು ತರಬೇಕು ಕುಲ ನೋಡಿ ಹೆಣ್ಣು ತರಬೇಕು" ಮುಂತಾದ ಗಾದೆ ಮಾತುಗಳು ಸಿಗುತ್ತವೆ. ತೆಲುಗಿನಲ್ಲಿಯೂ, "ಎದ್ದಲೊ ವಚ್ಚಿಂದಿ ಎರವುಲೋ ಪಾಯ" (ಎತ್ತಿನಿಂದ ಬಂದದ್ದು ಗೊಬ್ಬರದಲ್ಲಿ ಹೋಯ್ತು ), "ಪಾರಿಪೋಯೇ ತೊತ್ತು ಪಾಲುಕಿ ಎಪ್ಪೆಟ್ಟುಕುಂಡಾ ಪಾಯನಂಟ" (ಓಡಿಹೋಗುವವಳು ಹಾಲಿಗೆ ಹೆಪ್ಪಾಕದೇ ಹೋದಳಂತೆ), "ಆವು ಅರಿಲೇ, ದೂಡ ಅರಿಲೇ, ಗೊತ್ತು ಅರಿಸೆನಂಟ" (ಹಸು ಕೂಗಲಿಲ್ಲ, ಕರುವೂ ಕೂಗಲಿಲ್ಲ, ಗೊಂತು ಕೂಗಿತಂತೆ) ಮುಂತಾದ ಗಾದೆಗಳು ಚಾಲ್ತಿಯಲ್ಲಿವೆ. ಇವುಗಳಲ್ಲಿ ಕೆಲವು ನೇರವಾಗಿ ಕೃಷಿ ಕೆಲಸಗಳಿಗೆ ಸಂಬಂಧಿಸಿದ್ದರೆ ಮತ್ತೆ ಕೆಲವು ಬದುಕಿನ ಬೇರೆ-ಬೇರೆ ಸಂದರ್ಭಗಳಲ್ಲಿ ಇವುಗಳನ್ನು ರೂಪಕಗಳಾಗಿ ಬಳಸುವುದುಂಟು.

ಭತ್ತ ಮತ್ತು ರಾಗಿ ನಾಟಿ ಮಾಡುವಾಗ, ಬಂಡಿಗಳಲ್ಲಿ ಪ್ರಯಾಣಿಸುವಾಗ, ರಾಗಿ ಬೀಸುವಾಗ, ಬೆಳೆಗಳನ್ನು ಕೊಯ್ಯುವಾಗ, ದವಸ-ಧಾನ್ಯಗಳನ್ನು ಕುಟ್ಟುವಾಗ ಜೊತೆಗಾರರಿಗೆ ಆಯಾಸವಾಗದಿರಲ್ಲೆಂದು ಮನರಂಜಿಸಲು ಈ ರೀತಿಯ ಹಲವು ಪದಗಳನ್ನು ಹಾಡುತ್ತಾರೆ. ಮುಖ್ಯವಾಗಿ ಶಿವ, ಪಾರ್ವತಿ, ಸೀತೆ, ದ್ರೌಪದಿಯಂತವರಿಂದ ಮೊದಲ್ಗೊಂಡು ತಮ್ಮ ಸ್ಥಳೀಯ ದೈವಗಳು ಅಥವಾ ಹಿಂದೆ ಬದುಕಿ ಬಾಳಿದ್ದ ಅವರವರ ಸಮುದಾಯಗಳ ಮಹಿಳೆಯರನ್ನು ಕುರಿತು ಹಾಡುಗಳನ್ನು ಕಟ್ಟಿ ಹಾಡುತ್ತಿದ್ದರು. ಬಿತ್ತನೆ ಸಮಯದಲ್ಲಿ, ಕೊಯ್ಲು ಸಮಯದಲ್ಲಿ, ಬೀಸುವಾಗ, ಹಾಡುವ ಹಾಡುಗಳನ್ನು ಕುರಿತು ಕವಿರಾಜಮಾರ್ಗದಲ್ಲಿಯೂ ಉಲ್ಲೇಖವಿರುವುದನ್ನು ಗಮನಿಸಬಹುದು. ಇದಲ್ಲದೇ ಸೂರ್ಯೋದಯ, ಸೂರ್ಯಾಸ್ತಮಾನ, ಅಮಾವಾಸ್ಯೆ, ಹುಣ್ಣಿಮೆ, ಮಳೆ, ಗುಡುಗು, ಮಿಂಚು ಹೀಗೆ ಪ್ರಕೃತಿಯ ಎಲ್ಲ ವಿಸ್ಮಯಗಳಿಗೂ ಸಂಬಂಧಪಟ್ಟಂತೆ ಜನಪದರಲ್ಲಿ ಅವರದ್ದೇ ಆದ ಆಚಾರ-ವಿಚಾರ ಮತ್ತು ನಂಬಿಕೆಗಳು ಇವೆ.

ಉದಾಹರಣೆಗೆ, ಮಿಂಚಿನ ವೇಗದಲ್ಲಿ ರಥ ಸಂಚರಿಸುತ್ತಾ ಹೋಗುತ್ತಿದ್ದ ಅರ್ಜುನನ್ನು ತಡೆದ ಗುಡುಗೋಲಜ್ಜಿ, ಇಷ್ಟು ವೇಗವಾಗಿ ಏಕೆ, ಹೋಗುತ್ತೀಯಪ್ಪ, ಸ್ವಲ್ಪ ನಿಧಾನಕ್ಕೆ ನಡಿ ಬಸುರಿ-ಬಾಣಂತಿಯರು ಇರುತ್ತಾರೆ ಎಂದಳಂತೆ. ಆಗ

ಅರ್ಜುನನು ಇವಳ ಮಾತನ್ನು ಕೇಳದೇ ರಭಸವಾಗಿ ಮುನ್ನುಗ್ಗಿದಾಗ ಕೋಪಗೊಂಡ ಗುಡುಗೋಲಜ್ಜಿ ಮಾಡುವ ಶಬ್ದವೇ ಮಳೆ ಬಂದಾಗ ನಮಗೆ ಕೇಳಿಸುವ ಗುಡುಗು. ಇದು ಜನಪದರು ಗುಡುಗಿನ ಕುರಿತು ಕಟ್ಟಿಕೊಂಡಿರುವ ಕಥೆ. ಅದೇ ರೀತಿ ಸೂರ್ಯ ಚಂದ್ರರ ಕುರಿತಾಗಿಯೂ ಒಂದು ಆಸಕ್ತಿಕರವಾದ ಕತೆ ಜನಪದರಲ್ಲಿದೆ. ಅದೇನೆಂದರೆ, 'ಇಂದ್ರನ ಆಹ್ವಾನದ ಮೇರೆಗೆ ಸಹೋದರರಾದ ಸೂರ್ಯ ಚಂದ್ರರು ಔತಣಕ್ಕೆ ಹೋಗಿರುತ್ತಾರೆ. ಅಲ್ಲಿಂದ ವಾಪಸಾದಾಗ ಸೂರ್ಯ ಹೊಟ್ಟೆ ತುಂಬ ಉಂಡು ಹೊಟ್ಟೆಯ ಮೇಲೆ ಕೈಯಾಡಿಸಿಕೊಂಡು ಬಂದರೆ, ಚಂದ್ರ ತನ್ನ ತಾಯಿಗಾಗಿ ಅವನ ಉದ್ದುದ್ದವಿದ್ದ ಉಗುರುಗಳಲ್ಲಿ ವಿವಿಧ ರೀತಿಯ ಅಡುಗೆಗಳನ್ನು ತಂದಿರುತ್ತಾನೆ. ಇದನ್ನು ನೋಡಿದ ತಾಯಿ, ಎಂಥಹ ಕಾಲದಲ್ಲೂ ತಾಯಿಯನ್ನು ಮರೆಯದೇ ಅವಳಿಗಾಗಿ ಊಟವನ್ನು ತಂದ ಚಂದ್ರನು ಸದಾಕಾಲ ತಂಪಾಗಿರಲೆಂದು, ತಾಯಿಯನ್ನು ನೆನಪು ಮಾಡಿಕೊಳ್ಳದ ಸ್ವಾರ್ಥಿಯಾದ ಸೂರ್ಯ ಸದಾ ಉರಿಯುತ್ತಿರಲೆಂದು ಆ ತಾಯಿ ಶಾಪ ಕೊಟ್ಟಳಂತೆ.' ಇದು ಸೂರ್ಯ ಚಂದ್ರ ಸ್ಥಿತಿಗಳಿಗೆ ಸಂಬಂಧಿಸಿದ ಜನಪದರ ಸಮರ್ಥನೆ. ಜೊತೆಗೆ ತಂದೆ ತಾಯಿಯನ್ನು ಮರೆಯದೇ ಅವರ ಯೋಗಕ್ಷೇಮವನ್ನು ನೋಡುವ ಮಕ್ಕಳು ಸದಾಕಾಲ ತಂಪಾಗಿರುವರು ಎಂಬ ಮಹತ್ವದ ಸಂದೇಶವೂ ಸಹ ಈ ಕತೆಯಲ್ಲಿ ಅಡಗಿದೆ.

**ದ್ಯಾವರ/ಜಾತ್ರೆಗಳು**

ಜನಪದರ ಧಾರ್ಮಿಕ ಆಚರಣೆಯ ಬಹುದೊಡ್ಡ ಭಾಗ ಈ ದ್ಯಾವರಗಳು ಹಾಗೂ ಜಾತ್ರೆಗಳಿಗೆ ಸಂಬಂಧಿಸಿದ್ದಾಗಿದೆ. ದ್ಯಾವರ ಎಂದರೆ, ದೇವರಿಗೆ ಸಂಬಂಧಿಸಿದ ಆಚರಣೆ ಎಂದು ಅರ್ಥ ಮಾಡಿಕೊಳ್ಳಬಹುದು. ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲೆಗಳ ಭಾಗದಲ್ಲಿ ನಡೆಯುವ ಇಂತಹ ಆಚರಣೆಗಳಲ್ಲಿ ಮುಖ್ಯವಾಗಿ, ವನದ್ಯಾವರ, ಮುನಿದ್ಯಾವರ, ಹೊಸ ದ್ಯಾವರ, ಬಂಡಿ ದ್ಯಾವರ, ದೊಡ್ಡ ದ್ಯಾವರ, ಊರು ದ್ಯಾವರ, ಗುಡಿ ದ್ಯಾವರ, ಊರಮ್ಮನ ಪರಿಷೆ, ಕರಗ, ರಥೋತ್ಸವ, ದೀಪಗಳ ಮಹೋತ್ಸವ, ಮಕ್ಕಳಿಗೆ ಹೂ ಮುಡಿಸುವುದು, ಕಡಲೇ ಕಾಯಿ ಪರಿಷೆ, ಎತ್ತುಗಳ ಪರಿಷೆ ಮುಂತಾದವನ್ನು ಗಮನಿಸಬಹುದು. ಇವುಗಳಲ್ಲಿ ಕೆಲವು ಆಯಾ ಊರುಗಳ ಜನರೆಲ್ಲ ಸೇರಿ ಆಚರಿಸುವ ಆಚರಣೆಗಳಾದರೆ, ಮತ್ತೆ ಕೆಲವು ಆಯಾ ಸಮುದಾಯದ ಜನರು ಮಾತ್ರ ಆಚರಿಸುವಂತಹವು. ಇನ್ನು ಕೆಲವು ಆಚರಣೆಗಳು ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಆಚರಿಸುವಂತಹವು. ಉದಾಹರಣೆಗೆ: ಮುನಿದ್ಯಾವರ ಆಚರಣೆ.

ಮುನಿ ಎಂದರೆ ಮುನೀಶ್ವರ. ಊರ ಜನರೆಲ್ಲರೂ ಸೇರಿ ಮುನೀಶ್ವರನಿಗೆ ಆರಾಧನೆ ಮಾಡುವ, ಬಲಿ ನೀಡಿ ಅವನನ್ನು ಸಂತೃಪ್ತಿಗೊಳಿಸುವ ಆಚರಣೆ. ಇದನ್ನು ಗೊತ್ತಾದ ಒಂದು ದಿನ ಎಲ್ಲರು ದೇವಾಲಯಕ್ಕೆ ತೆರಳಿ ದೇವರಿಗೆ ಬಲಿ ನೀಡಿ ಆ ಪ್ರಾಣಿಯನ್ನು ಮನೆಗೆ ತಂದು ಅಡುಗೆ ಮಾಡುವ ಮೂಲಕ ಆಚರಿಸುವರು. ಇನ್ನು ಸಾಮಾನ್ಯವಾಗಿ ಮುನಿದ್ಯಾವರಕ್ಕೆ ಒಂದು ವಾರ ಮುನ್ನ ವನ ದ್ಯಾವರವನ್ನು

ಆಚರಿಸುವ ಪದ್ಧತಿ ಕೆಲವು ಭಾಗಗಳಲ್ಲಿ ಚಾಲ್ತಿಯಲ್ಲಿದೆ. ದೇವಾಲಯದ ಹತ್ತಿರವೇ ಬೇಟೆಯನ್ನು ಕಡಿದು ಅಲ್ಲೇ ಅಡುಗೆ ಸಿದ್ಧಪಡಿಸಿ ವನ ಭೋಜನ ಮಾಡುವುದು ಈ ಆಚರಣೆಯ ವಿಶೇಷತೆ. ಸಾಮಾನ್ಯವಾಗಿ ಇದನ್ನು ವರ್ಷಕ್ಕೆ ಒಮ್ಮೆ ತಪ್ಪದೇ ಆಚರಿಸಲಾಗುತ್ತದೆ.

ಇನ್ನು ಬಂಡಿ ದ್ಯಾವರ, ಹೊಸ ದ್ಯಾವರಗಳನ್ನು ನಿರ್ದಿಷ್ಟ ಒಕ್ಕಲಿಗ ಸಮುದಾಯದವರು ಸೇರಿ ಆಚರಿಸುವುದನ್ನು ಕಾಣಬಹುದು. ಬಂಡಿಗಳನ್ನು ಚೆನ್ನಾಗಿ ಅಲಂಕರಿಸಿ ದೇವಾಲಯಕ್ಕೆ ತೆರಳಿ, ರಾಸುಗಳಿಗೆ ಮತ್ತು ದೇವರಿಗೆ ಪೂಜಿಸುವ ಮೂಲಕ ಬಂಡಿ ದ್ಯಾವರವನ್ನು ಆಚರಿಸಲಾಗುತ್ತದೆ. ಇದನ್ನು ವರ್ಷಕ್ಕೆ ಒಮ್ಮೆ ತಪ್ಪದೇ ಆಚರಿಸಬೇಕೆಂಬ ನಿಯಮವಿರುವುದಿಲ್ಲ. ಆದರೆ, ಹೊಸ ದ್ಯಾವರವನ್ನು ತಪ್ಪದೇ ವರ್ಷಕ್ಕೊಮ್ಮೆ ಆಚರಿಸಲಾಗುತ್ತದೆ. ಸಾಮಾನ್ಯವಾಗಿ ಯುಗಾದಿಯ ನಂತರ ಈ ಆಚರಣೆ ನಡೆಯುತ್ತದೆ. ಆ ಊರಿನ ಎಲ್ಲ ಹೆಂಗಸರು ಮುಖ್ಯವಾಗಿ ಸೊಸೆಯರು ಸಂಜೆ ತಲೆಯ ಮೇಲೆ ತಂಬಿಟ್ಟಿನ ದೀಪವನ್ನು ಹೊತ್ತುಕೊಂಡು ಊರ ದೇವರು ಮತ್ತು ಕುಲ ದೈವಕ್ಕೆ ನಮಿಸುವುದು ವಾಡಿಕೆ. ಬಂಡಿ ದ್ಯಾವರ ಮಾಡುವಾಗ ಎಲ್ಲಾ ಕಾರ್ಯಗಳನ್ನು ಮುಗಿಸಿ ಗಂಗಮ್ಮ ದೀಪೋತ್ಸವ ಮಾಡಿ ಕುರಿ ಬಲಿ ಕೊಟ್ಟು ಅಲ್ಲೇ ಅಡುಗೆ ಮಾಡಿ ತಿನ್ನುವ ಪದ್ಧತಿ ಇದೆ. ಇನ್ನೂ ಕೆಲವು ಕಡೆ ಹೊಸ ದ್ಯಾವರ ಪದ್ಧತಿಯಲ್ಲಿ ಕೋಳಿಯನ್ನು ಬಲಿ ಕೊಡಲಾಗುತ್ತದೆ.

ದೊಡ್ಡ ದ್ಯಾವರದ ಆಚರಣೆಗೆ ವಿವಿಧ ಪ್ರಾಂತ್ಯಗಳಲ್ಲಿ ವಿವಿಧ ರೀತಿಯ ಐತಿಹ್ಯಗಳು ಇರುವುದನ್ನು ಗಮನಿಸಬಹುದು. ಮೊರಸು ನಾಡು ಪ್ರಾಂತ್ಯದ ಯಾಕಿಲ ದೊರೆಯೊಂದಿಗೆ ವಿವಾಹವನ್ನು ಇಷ್ಟ ಪಡದ ವೀರವನಿತೆ ಸೊಣ್ಣಮ್ಮ ತನ್ನ ಕುಲಬಾಂಧವರೊಂದಿಗೆ ಶಿಡ್ಲಘಟ್ಟ ಸೀಮೆಗೆ ತಪ್ಪಿಸಿಕೊಂಡು ಬಂದು ನೆಲೆಸುತ್ತಾಳೆ. ಆಕೆಯನ್ನು ಹುಡುಕಿಕೊಂಡು ಬಂದ ಯಾಕಿಲ ದೊರೆಯು ಆಕೆಯ ಅಣ್ಣಂದಿರನ್ನು ಮತ್ತವರ ಪರಿವಾರವನ್ನು ಕೊಲ್ಲುತ್ತಾನೆ. ಆಗ ವೀರ ಸೊಣ್ಣಮ್ಮನು ಅವನ ಮೇಲೆ ಕೋಪಿಸಿಕೊಂಡು ಎರಡು ಶಾಪಗಳನ್ನು ದೊರೆಗೆ ಕೊಟ್ಟಳಂತೆ. ಮೊದಲನೆಯದಾಗಿ ಮುಂದಿನ ಜನ್ಮದಲ್ಲಿ ದೊರೆ ಹಂದಿಯಾಗಿ ಹುಟ್ಟಬೇಕು, ವೀರ ಸೊಣ್ಣಮ್ಮ ವೀರ ಲಗುಮಮ್ಮನಾಗಿ ಜನಿಸಿ ಯಾಕಿಲ ದೊರೆಯನ್ನು ಕೊಂದು ಅವನ ತಲೆಯ ಮೇಲೆ ದೀಪ ಉರಿಸಿಕೊಂಡು ಜಾತ್ರೆ ಮಾಡಿಸಿಕೊಳ್ಳುವುದು. ಎರಡನೆಯದಾಗಿ ವೀರ ಸೊಣ್ಣಮ್ಮನ ವಂಶದಲ್ಲಿ ಮುಂದೆ ಹುಟ್ಟುವ ಹೆಣ್ಣು ಮಕ್ಕಳು ಸೌಂದರ್ಯವತಿಯರಾಗದೇ ಇರುವುದು. ಈ ಎರಡು ಶಾಪಗಳು ನೆರವೇರಿದ್ದು ಇದರ ಪರಿಣಾಮವಾಗಿಯೇ ಈ ವಂಶದಲ್ಲಿ ಸುಂದರವಾದ ಹೆಣ್ಣುಗಳು ಜನಿಸುವುದಿಲ್ಲ ಎಂದು ಇಲ್ಲಿನ ಜನರು ಇಂದಿಗೂ ನಂಬಿದ್ದಾರೆ. ಶಾಪದ ಪರಿಣಾಮವಾಗಿ ಹಂದಿಯ ರೂಪದಲ್ಲಿದ್ದ ಯಾಕಿಲ ದೊರೆಯನ್ನು ಕೊಂದ ನೆನಪಿಗಾಗಿ ದೊಡ್ಡ ದ್ಯಾವರದ ಸಂದರ್ಭದಲ್ಲಿ ಹಂದಿಯೊಂದನ್ನು ತಂದು ಅದನ್ನು ನೀರಿನಲ್ಲಿ ಮುಳುಗಿಸಿ ಕೊಂದು ಅದರ ತಲೆಯ ಮೇಲೆ ದೀಪವನ್ನಿಟ್ಟು ಲಗುಮಮ್ಮನಿಗೆ ದ್ಯಾವರ ಆಚರಣೆ ಮಾಡುವುದು ಇಂದಿಗೂ ಚಾಲ್ತಿಯಲ್ಲಿದೆ.

ಅಷ್ಟೇ ಅಲ್ಲದೇ ಕೋಲಾರ–ಚಿಕ್ಕಬಳ್ಳಾಪುರ ಭಾಗಗಳಲ್ಲಿ ಕುರುಬ ಸಮುದಾಯದವರು ದೊಡ್ಡ ದ್ಯಾವರುಗಳ ಆಚರಣೆ ತುಂಬಾ ವಿಶೇಷತೆ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಒಳಗೊಂಡಿದೆ. ಕೋಲಾರ ತಾಲ್ಲೂಕಿನ ಅರಭಿಕೊತ್ತನೂರು, ಬ್ಯಾಲಹಳ್ಳಿ, ಸುಗಟೂರು, ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಧನಮಿಟ್ಟೇನಹಳ್ಳಿ, ಚೇಳೂರು ತಾಲ್ಲೂಕಿನ ಗೊಲ್ಲಪಲ್ಲಿ, ಚಿಕ್ಕಬಳ್ಳಾಪುರ ತಾಲ್ಲೂಕಿನ ಮಂಚನಬೆಲೆ ಮುಂತಾದ ಗ್ರಾಮಗಳಲ್ಲಿ ಈ ಜನಾಂಗದ ಕುಲದ್ಯಾವರ ಅತ್ಯಂತ ವಿಜೃಂಭಣೆಯಿಂದ ಮತ್ತು ಶ್ರದ್ಧಾ ಭಕ್ತಿಯಿಂದ ಈಶ್ವರನ ಹೆಸರಿನಲ್ಲಿ ಜರಗುತ್ತದೆ. ಪ್ರತಿ ಐದು ವರ್ಷಕ್ಕೊಮ್ಮೆ ಲಕ್ಷಾಂತರ ಕುಲ–ಬಾಂಧವರು ಸೇರಿ ಮೂರು ದಿನಗಳ ಕಾಲ ವೈಭವದಿಂದ ಮುಖ್ಯವಾಗಿ ಡೊಳ್ಳು ಕುಣಿತ, ತೆಂಗಿನಕಾಯಿ ಪವಾಡ, ಚಡಿ ಏಟು ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾರೆ.

ಇನ್ನು ಊರ ದ್ಯಾವರವನ್ನು ಗ್ರಾಮ ದೇವತೆಯಾಗಿ ಆಚರಿಸಲಾಗುತ್ತದೆ. ಗ್ರಾಮ ದೇವತೆ ಊರನ್ನು ಚನ್ನಾಗಿಡಲಿ ಎಂದು ಆಯಾ ದೇವರಿಗೆ ಒಪ್ಪುವ ಅಡುಗೆಯನ್ನು ಮಾಡಿ, ದೀಪೋತ್ಸವವನ್ನು ಮಾಡಿ ದೇವರಿಗೆ ಶಾಂತಿ ಮಾಡಲಾಗುವುದು. ಇದಲ್ಲದೇ ಮಳೆ ಬಾರದಿದ್ದಾಗ, ಜಾನುವಾರುಗಳಿಗೆ ಅಥವಾ ಮನುಷ್ಯರಿಗೆ ರೋಗರುಜಿನಗಳ ಬಾಧೆ ತಗುಲಿದಾಗ ಅವುಗಳ ನಿವಾರಣೆಗಾಗಿ ಸಂಬಂಧಿಸಿದ ದೇವರುಗಳಿಗೆ ವಿಶೇಷ ಪೂಜೆ, ಆಚರಣೆ, ದ್ಯಾವರ ಇತ್ಯಾದಿಗಳನ್ನು ಮಾಡಲಾಗುತ್ತದೆ. ಹಾಗೆಯೇ ಕರಗ ಹಾಗೂ ರಥೋತ್ಸವಗಳನ್ನು ಈ ಭಾಗದ ಹಲವು ಊರುಗಳಲ್ಲಿ ಆಚರಿಸಲಾಗುತ್ತದೆ. ವೇಮಗಲ್, ಕೋಲಾರ, ಮಾಲೂರು, ಚಿಂತಾಮಣಿ, ಬೇತಮಂಗಲ, ಚಿಕ್ಕಬಳ್ಳಾಪುರ, ಜಂಗಮಕೋಟೆ, ಶಿಡ್ಲಘಟ್ಟ, ಹೋಳೂರು ಈ ಊರುಗಳು ಕರಗ ಆಚರಣೆಗೆ ಹೆಸರುವಾಸಿಯಾದರೆ, ಕ್ಯಾಲನೂರು, ಎಚ್.ಕ್ರಾಸ್, ನಂದಿ, ಕೈವಾರ, ಕೋಟಗಲ್, ಕಂಗಾನಹಳ್ಳಿ, ಪೆದ್ದೂರು, ತಾಡಿಗೋಳ್, ಆವನಿ, ಕೋನಕುಂಟ್ಲು, ಇವು ಜಾತ್ರಾ–ರಥೋತ್ಸವಗಳಿಗೆ ಹೆಸರುವಾಸಿಯಾಗಿರುವುದನ್ನು ಕಾಣಬಹುದು. ಚಿಂತಾಮಣಿ ತಾಲ್ಲೂಕಿನ ಮುರುಗಮಲ್ಲ, ಸಿದ್ಧಿಮಠ ಹಾಗೂ ನಿಮ್ಮಕಾಯಲಹಳ್ಳಿ ಎಂಬ ಊರುಗಳಲ್ಲಿ ನಡೆಯುವ ಉರುಸುಗಳು ಹಿಂದೂ–ಮುಸ್ಲಿಂ ಭಾವೈಕ್ಯತೆಗೆ ಹೆಸರುವಾಸಿಯಾಗಿವೆ.

ಅವಿಭಜಿತ ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕೃಷಿ ಚಟುವಟಿಕೆಗಳು ಜಾತ್ರಾ ಆಚರಣೆಗಳು ಹಾಗೂ ದ್ಯಾವರಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಜನಪದ ನಂಬಿಕೆ, ಆಚರಣೆ, ಐತಿಹ್ಯ ಹಾಗೂ ಕಥೆಗಳು ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು.

**ಉಪಸಂಹಾರ:**

ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲೆಗಳ ಮೌಖಿಕ ಸಾಹಿತ್ಯ ಪರಂಪರೆ ಕೃಷಿ ಜೀವನ, ದ್ಯಾವರ ಆಚರಣೆಗಳು, ಜಾತ್ರೆಗಳು ಹಾಗೂ ಜನಪದ ನಂಬಿಕೆಗಳೊಂದಿಗೆ ನಿಕಟ ಸಂಬಂಧ ಹೊಂದಿರುವ ಸಮೃದ್ಧ ಸಾಂಸ್ಕೃತಿಕ ಪರಂಪರೆಯಾಗಿದೆ. ಕೃಷಿ

ಚಟುವಟಿಕೆಗಳ ಪ್ರತಿಯೊಂದು ಹಂತದಲ್ಲಿಯೂ ರೂಪುಗೊಂಡ ಜನಪದ ಗೀತೆಗಳು, ಗಾದೆಗಳು, ಕಥೆಗಳು ಮತ್ತು ಆಚರಣೆಗಳು ಜನರ ಜೀವನಾನುಭವ, ಧಾರ್ಮಿಕ ನಂಬಿಕೆ ಹಾಗೂ ಸಾಮಾಜಿಕ ಒಗ್ಗಟ್ಟನ್ನು ಪ್ರತಿಬಿಂಬಿಸುತ್ತವೆ. ದ್ಯಾವರಗಳು ಮತ್ತು ಜಾತ್ರೆಗಳು ಕೇವಲ ಧಾರ್ಮಿಕ ಆಚರಣೆಗಳಲ್ಲ; ಅವು ಸಮುದಾಯದ ಐಕ್ಯತೆ, ಸಾಂಸ್ಕೃತಿಕ ಗುರುತು ಮತ್ತು ಸ್ಥಳೀಯ ಇತಿಹಾಸವನ್ನು ಜೀವಂತವಾಗಿಡುವ ಪ್ರಮುಖ ಸಾಧನಗಳಾಗಿವೆ. ಇಂದಿನ ಆಧುನಿಕ ಯಾಂತ್ರೀಕರಣ ಮತ್ತು ಜೀವನಶೈಲಿಯ ಬದಲಾವಣೆಗಳಿಂದ ಈ ಮೌಖಿಕ ಪರಂಪರೆ ಕ್ರಮೇಣ ಕ್ಷೀಣಿಸುತ್ತಿರುವ ಹಿನ್ನೆಲೆಯಲ್ಲಿ, ಇವುಗಳ ದಾಖಲಾತಿ, ಸಂಶೋಧನೆ ಮತ್ತು ಸಂರಕ್ಷಣೆ ಅತ್ಯಗತ್ಯವಾಗಿದೆ. ಇಂತಹ ಅಧ್ಯಯನಗಳು ಕರ್ನಾಟಕದ ಜನಪದ ಪರಂಪರೆಯ ಸಾಂಸ್ಕೃತಿಕ ವೈವಿಧ್ಯವನ್ನು ಅರ್ಥಮಾಡಿಕೊಳ್ಳಲು ಮತ್ತು ಮುಂದಿನ ಪೀಳಿಗೆಗಳಿಗೆ ಸಂರಕ್ಷಿಸಲು ಮಹತ್ವದ ಕೊಡುಗೆಯನ್ನು ನೀಡುತ್ತವೆ.

**ಪರಾಮರ್ಶನ ಗ್ರಂಥಗಳು:**


1. ಚಿತ್ತರಂಜನ್ ಹೆಚ್., (2007), ಕೋಲಾರ ಜಿಲ್ಲಾ ಗೆಜೆಟಿಯರ್ (ಪರಿಷ್ಕೃತ ಆವೃತ್ತಿ), ಬೆಂಗಳೂರು: ಕರ್ನಾಟಕ ಗೆಜೆಟಿಯರ್ ಇಲಾಖೆ.
2. ಆದಿಶಂಕರ್ ಕೆ., (1968), ಕೋಲಾರ ಜಿಲ್ಲಾ ಗ್ಯಾಜೆಟಿಯರ್, ಬೆಂಗಳೂರು: ಕರ್ನಾಟಕ ಸರ್ಕಾರ.
3. ಕಾಳೇಗೌಡ ನಾಗವಾರ ಮತ್ತು ಆನಂದಮೂರ್ತಿ ಜಿ.ವಿ. (ಸಂ.), (2000), ಹಲವು ತೋಟದ ಹೂಗಳು, ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.
4. ಗೋವಿಂದರಾಜು ಟಿ., (2014), ಬಯಲು ಸೀಮೆಯ ಜನಪದ ಹಾಡ್ಗುಣಿತಗಳು, ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.
5. ಗೋಪಾಲಗೌಡ ಕಲ್ವಮಂಜಲಿ (ಸಂ.), (2007), ಹಂಡಿಗನಾಳ ಶ್ರೀ ಈರಣ್ಣಸ್ವಾಮಿ ಕೆಂಪಣ್ಣಸ್ವಾಮಿ ಕಥಾಮೃತ, ಹಂಡಿಗನಾಳ: ಈರಣ್ಣದೇವರ ದೇವಾಲಯ ಟ್ರಸ್ಟ್.
6. ಮುನಿರಾಜು, ಕೋಲಾರ ಜಿಲ್ಲಾ ಜನಪದ ವೈದ್ಯ, ಕೋಲಾರ.